ಸತ್ಯವೇ? ಈ ಗರುಡ ಪುರಾಣ ಸಾವಿಗೆ ಮುದ್ರೆ ಒತ್ತಿ, ಮುಂದಿನ ಶಿಕ್ಷೆಗೆ ಯುಕ್ತಿ ಹೆಣೆಯುವದಾದಲ್ಲಿ, ಇದಕ್ಕೂ ನನಗೂ ಏನು ಸಂಬಂಧ? ಸತ್ತ ಮೇಲೆಯೂ ಬಿಡದ ಈ ಗರುಡ ಪುರಾಣ ಇದು ನನ್ನದಲ್ಲ. ಈ ಭೂಮಿಯದಲ್ಲ. ಈ ಲೋಕದ್ದಲ್ಲ. ಸಾವು ಬರುವುದಿದ್ದರೆ ಬರಲಿ. ಅದು ನಾಶಕ್ಕಾಗಿ ಬರದಿರಲಿ! ಅದಕ್ಕೆ ಪ್ರವೇಶವಿಲ್ಲ. ನನ್ನ ತಂಗಿಯು ಉಳಿಯಲೇಬೇಕು.

ನನಗೆ ಒಮ್ಮೆಲೇ ಸಿಡಿಲು ತಾಗಿದಂತೆನಿಸಿ, ನನಗರಿವಿಲ್ಲದಂತೆಯೇ ನುಡಿದುಬಿಟ್ಟೆ: "ರಾಯರೇ ತಂಗಿಯ ಆತ್ಮ ಎಲ್ಲಿಗೂ ಹೋಗುವುದು ಬೇಡ. ಅದು ಇಲ್ಲಿಯೇ ಇರಬೇಕು," ಎಂದು ಅವಸರವಾಗಿ ನುಡಿಯುತ್ತ ಮನೆಯ ಕಡೆ ನಡೆದುಹೋದೆ.

★★★

ಈ ಮನೆ, ನಮ್ಮ ಈ ಮನೆ, ಇದು ಆಕೆ ಹುಟ್ಟಿ ಬೆಳೆದ ಅರಮನೆ. ಈ ಮನೆಯಲ್ಲಿ, ಈ ರಾತ್ರಿಯಿಂದ ಆಕೆಯ ಆತ್ಮ ಇಲ್ಲಿಯೇ ತಂಗಬೇಕು. ಗರುಡ ಪುರಾಣದಲ್ಲಿ ಹೇಳಿದಂತೆ ಆಕೆಯ ಜೀವಾತ್ಮ ಆಶ್ರಯಕ್ಕಾಗಿ ಏನನ್ನೂ ಹುಡುಕಿಕೊಂಡು ಹೋಗುವುದು ಬೇಡ. ಅದು ಈ ಅರಮನೆಗೆ ಬರಬೇಕು. ಆಕೆ ಇಲ್ಲಿಯೇ ತಂಗಬೇಕು.

ನಮ್ಮ ಮನೆ ಈ ಊರಿನ ಗುಡ್ಡದ ಎತ್ತರದ ದಿನ್ನೆಯ ಮೇಲಿದೆ. ಈ ಮನೆಯ ಮೇಲಿಂದ ನಿಂತು, ಕೆಳಗಡೆ ನೋಡಿದರೆ ಹಳ್ಳಿಯ ಆ ಪೂರ್ಣ ಪ್ರದೇಶ ತೆರೆದ ನಕಾಶದಂತೆ ಕಾಣುತ್ತದೆ. ಈ ಮನೆ ಶಿವನ ಹಣೆಯಂತಿದೆ. ಇಲ್ಲಿ ನಿಂತು ನೋಡಿದರೆ ಇಡೀ ಊರಿಗೆಊರೇ ಕಾಣುತ್ತದೆ. ನಡೆದಾಡುವವರು, ಕುಳಿತವರು, ಹರಿದಾಡುವವರು, ಆಟ ಆಡುವವರು, ಹರಟೆ ಹೊಡೆಯುವವರು, ಚಕ್ಕಂದದಲ್ಲಿದ್ದವರು ಎಲ್ಲರೂ ಕಾಣುತ್ತಾರೆ. ಈ ಮನೆ ಈ ಊರಿನ ಮುಖಕ್ಕೆ ಹಿಡಿದ ಕನ್ನಡಿಯಂತಿದೆ.

ಮನೆಗೆ ಬಂದೆ. ಮನೆಯಲ್ಲಿಯ ಎಲ್ಲ ದೀಪಗಳನ್ನೂ ಹಚ್ಚಿದೆ. ದಸರಾ, ದೀಪಾವಳಿಗೆ ತಂದಿದ್ದ ಎಲ್ಲ ಬಣ್ಣಬಣ್ಣದ ಮಿಂಚಿನ ಗೊಂಚಲುಗಳ ಬಲ್ಬಿನ ಸರಪಳಿಗಳನ್ನು ಮನೆಯ ಗೋಡೆಗಳ ಮೇಲೆಲ್ಲಾ ಇಳಿಬಿಟ್ಟೆ. ಅವು ಝುಗಝುಗಿಸ ಹತ್ತಿದವು. ಮನೆಯ ಬಾಗಿಲಿಗೆ ದೊಡ್ಡ ಅಕ್ಷರದಲ್ಲಿ 'ತಂಗಿಯ ಮನೆ ಸ್ವಾಗತ' ಎಂದು ಬರೆದೆ. ಅಕ್ಷರಗಳ ಎದೆಯ ತುಂಬ ಲೈಟಿನ ಮಿಂಚಿನ ಗೊಂಚಲುಗಳನ್ನು ಬಿಟ್ಟೆ. ಮನೆಯ ಎದುರಿಗೆ ಒಂದುಕ್ಷಣ ಹೊತ್ತು ನಿಂತು ನೋಡಿದೆ. ಮೃತ್ಯು ಲೋಕದ ಮಹಾ ಬೆಳಕಿನ ಮನೆಯಾಗಿ ಗೋಚರಿಸುತ್ತಿತ್ತು. ಹೌದು! ಅದು ಬೆಳಕು ಸುರಿದ ಅರಮನೆಯಾಗಿತ್ತು. ನನ್ನ ತಂಗಿ ಈ ದೀಪಗಳ ಮನೆಗೆ ಬರಬೇಕು. ಈ ದೀಪಗಳ ಮಧ್ಯೆ ಸಾವಕಾಶವಾಗಿ ನಡೆದುಬರಬೇಕು. ಮೆಲ್ಲಗೆ ಮೆಲ್ಲಗೇ ಹೆಜ್ಜೆ ಇಡುತ್ತ ಬರಬೇಕು. ಆಕೆಯ ಆತ್ಮ ಇಲ್ಲಿಯೇ ತಂಗಬೇಕು. ಆಕೆಯ ಆತ್ಮ ಎಲ್ಲಿಗೂ ಹೋಗಕೂಡದು. ಆಕೆಯ ಆತ್ಮ ಸದಾಕಾಲ ಇಲ್ಲಿಯೇ ಇರಬೇಕು.

ಭಾಗಜ್ಜಿ, ಏದುಸಿರು ಬಿಡುತ್ತ, ಏರಿ ಹತ್ತಿ ಬೆಳಕು ಸುರಿಯುತ್ತಿದ್ದ ಮನೆಗೆ ಬಂದಳು. ಆಕೆಗೆ ರಾಘವಾಚಾರ್ಯರ ಜೊತೆಗಿನ ಸಂಭಾಷಣೆ ಹಾಗು ಸಾವಿನ ವೃತ್ತಾಂತಗಳ ಬಗ್ಗೆ ಹೇಳಿದೆ. ಆಕೆಗೆ ಥಟ್ಟನೇ ಏನೋ ಹೊಳೆದಂತಾಗಿ ಮತ್ತೆ ತನ್ನ ಮನೆಗೆ ಮರಳಿದಳು. ನಾನು ಕೆಲವು ಹೊತ್ತು ಮನೆಯ ಎದುರಿಗೇ ಕುಳಿತಿದ್ದೆ. ಸ್ವಲ್ಪ ಸಮಯದ ನಂತರ ಭಾಗಜ್ಜಿ, ಕೈಯಲ್ಲಿ ಉರಿಯುತ್ತಿರುವ ದೀಪದ ಪಣತಿ ಹಿಡಿದು ಅದಕ್ಕೆ ಸೆರಗಿನ ಮರೆವು ಮಾಡಿ ಸಾವಕಾಶವಾಗಿ ಏರಿ ಬರಹತ್ತಿದ್ದಳು. ಬಂದವಳೇ ಆ ದೀಪವನ್ನು ಮನೆಯ ಬಾಗಿಲು ಬಳಿ ಇಟ್ಟಳು. ''ಮಗಳSS ನೀನು ಎಲ್ಲಿಗೂ ಹೋಗಬ್ಯಾಡ, ಇಲ್ಲಿಗೇ ಬಾ,'' ಎಂದು ಕೈಮುಗಿದು ಮತ್ತೆ ದುಡುದುಡು ತನ್ನ